**ಮಧ್ಯಕಾಲೀನ ಅರ್ಜಿಯ ಆದೇಶದ ಮೇರೆಗೆ ದಿನಾಂಕಃ 17.02.2025 ರಂದು ಸಾಕ್ಷಿಯನ್ನು ಪುನಃ ಹಿಂದಕ್ಕೆ ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.**

## ಪಾಟೀಸವಾಲುಃ ಆರೋಪಿಯ ಪರ ಶ್ರೀ ಪಿ.ಕೆ.ಆರ್ ವಕೀಲರಿಂದಃ

1. ನಾನು ಸಬ್ ಕಂಟ್ರಾಕ್ಟರ್ ಆಗಿ ಕೆಲಸ ಮಾಡುತ್ತೇನೆ. ಲೈಸನ್ಸ್ ಇರುವವರು ಕಂಟ್ರಾಕ್ಟರ್ ನಾವು ಅವರಿಂದ ಉಪಗುತ್ತಿಗೆ ಮೇಲೆ ಕೆಲಸ ತೆಗೆದುಕೊಂಡು ಮಾಡುವುದರಿಂದ ನಮ್ಮನ್ನು ಸಬ್ ಕಂಟ್ರಾಕ್ಟರ್ ಎನ್ನುತ್ತಾರೆ. ನಾನು ನನ್ನ ದೂರಿನಲ್ಲಿ ನಾನು ಕಂಟ್ರಾಕ್ಟರ್ ಅಥವಾ ಸಬ್ ಕಂಟ್ರಾಕ್ಟರ್ ಆಗಿ ಕೆಲಸ ಮಾಡುತ್ತೇನೆ ಎಂದು ಹೇಳಿದ್ದೇನಾ ಎಂದರೆ ಇಲ್ಲ, ಗುತ್ತಿಗೆ ಕೆಲಸ ಎಂದು ಹೇಳಿದ್ದೇನೆ. ಕಂಟ್ರಾಕ್ಟರ್ ಮತ್ತು ಸಬ್ ಕಂಟ್ರಾಕ್ಟರ್ ಎಲ್ಲರಿಗೂ ಲೈಸನ್ಸ್ ಬೇಕು ಎಂದರೆ ಸಬ್ ಕಂಟ್ರಾಕ್ಟರ್ ಗಳಿಗೆ ಲೈಸನ್ಸ್ ಇರುವುದಿಲ್ಲ. ನನ್ನ ಬಳಿ ಯಾವುದೇ ಲೈಸನ್ಸ್ ಇಲ್ಲ ಎಂದರೆ ಸರಿ.

2. ನನ್ನ ಹೆಸರಿನಲ್ಲಿ 3 ಎಕರೆ 30ಗುಂಟೆ ಜಮೀನಿದೆ. ಸದರಿ ಜಮೀನಿನಲ್ಲಿ ಬಾಳೆ, ಅರಿಶಿಣ, ಜೋಳ ಇತ್ಯಾದಿ ಬೆಳೆಯುತ್ತೇನೆ. ಆರ್.ಟಿ.ಸಿ. ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಬಲ್ಲೆ. ಆದರೆ ಈ ಬೆಳೆಗಳ ಹೆಸರು ಆರ್.ಟಿ.ಸಿ.ಯಲ್ಲಿ ಬರುವುದಿಲ್ಲ. ಬಾಳೆ, ಅರಿಶಿಣ, ಮುಸುಕಿನ ಜೋಳ ಇವೆಲ್ಲವನ್ನು ನಾನು ಆಳುಗಳನ್ನು ತೆಗೆದುಕೊಂಡು ಬೆಳೆಯುತ್ತೇನೆ. ಆಳುಗಳು ಸಿಬಿಟಿ ಕಾಲೋನಿ, ದರ್ಗಾ, ವಿನೋಬಾ ಕಾಲೋನಿ, ದರ್ಗಾ ಈ ಎಲ್ಲಾ ಕಡೆಯಿಂದ ಫೋನ್ ಮಾಡಿದರೆ ಬರುತ್ತಾರೆ, ಹಜಾದ್ ನಗರದಿಂದಲೂ ಬರುತ್ತಾರೆ.

3. ಮುಸುಕಿನ ಜೋಳ ಬೆಳೆಯಲು ಆರೋಪಿಗೆ ನಾನು ನಮ್ಮ ಜಮೀನನ್ನು ಗುತ್ತಿಗೆಗೆ ಕೊಟ್ಟಿದ್ದೆ ಎಂದರೆ ಸಾಕ್ಷಿ ಹೊಗೆಸೊಪ್ಪು ಬೆಳೆಯಲು ಕೊಟ್ಟಿದ್ದೆ ಎನ್ನುತ್ತಾರೆ, ಪುನಃ ಸಾಕ್ಷಿ ಶುಂಠಿ ಬಿಟ್ಟು ಅವರ ಬೇರೆ ಏನಾದರೂ ಬೆಳೆಯಬಹುದು ಎಂದು ಹೇಳಿ ಕೊಟ್ಟಿದ್ದೆ. ಬೇರೆ ಬೇರೆ ಬೆಳೆಗೆ ಬೇರೆ ಬೇರೆ ಗುತ್ತಿಗೆ ಹಣ ಕೊಡಬೇಕು ಎಂದರೆ ಸರಿ. ಹೊಗೆಸೊಪ್ಪು ಬೆಳೆಯಲು ವರ್ಷಕ್ಕೆ ರೂ.25,000/- ಕೊಡಬೇಕು. ಪಂಪ್ ಸೆಟ್ ಅನ್ನು ಜಮೀನಿನವರೆ ರೆಡಿ ಮಾಡಿಸಿಕೊಡಬೇಕು ಎಂದರೆ ಗುತ್ತಿಗೆ ಪಡೆದವರೆ ಮಾಡಿಕೊಳ್ಳಬೇಕು. ಆರೋಪಿಗೆ ಜಮೀನನ್ನು ಗುತ್ತಿಗೆ ಕೊಡುವಾಗ ಬೋರ್ ಅನ್ನು

ನಾನೇ ರಿಪೇರಿ ಮಾಡಿಸಿಕೊಟ್ಟಿದ್ದೆ ಆ ಸಂಬಂಧ ನನಗೆ ರೂ.2 ಲಕ್ಷ ಖರ್ಚು ಬಂದಿತ್ತು, ಪೈಪ್ ಸಹ ನಾನೇ ಕೊಟ್ಟಿದ್ದೆ ಎನ್ನುತ್ತಾರೆ.

**4.** ಗುತ್ತಿಗೆಗೆ ಜಮೀನು ಬಿಟ್ಟುಕೊಡುವಾಗ ಬೋರ್ವೆಲ್, ಪೈಪ್ ಎಲ್ಲವನ್ನು ನಮಗೆ ಬಿಟ್ಟುಕೊಟ್ಟು ಹೋಗಬೇಕು ಎಂದರೆ ಅವರು ಕೆಟ್ಟು ಹೋದ ಬೋರ್ ವೆಲ್ ಅನ್ನು ಅವರು 2 ತಿಂಗಳಾದರು ರಿಪೇರಿ ಮಾಡಿಸಿಕೊಳ್ಳಲಿಲ್ಲ, ನಮ್ಮ ತೆಂಗಿನ ಮರಗಳು ಒಣಗಿ ಹೋಗುತ್ತಿದ್ದವು ಆದ್ದರಿಂದ ನಾನೇ ರೂ.16,000/- ಖರ್ಚು ಮಾಡಿ ನಾನೇ ರಿಪೇರಿ ಮಾಡಿಸಿದ್ದೆ. ಈ ರೀತಿ ರಿಪೇರಿ ಮಾಡಿಸಿ ಸುಮಾರು 1 ½ ವರ್ಷ ಆಯಿತು, ರಿಪೇರಿ ಮಾಡಿಸಿದ ದಿನಾಂಕ ನನಗೆ ನೆನಪಿಲ್ಲ. ಆಗ ನನಗೆ ಸುಮಾರು 6 ತಿಂಗಳ ಕಾಲ ಹುಷಾರು ತಪ್ಪಿತ್ತು ಎನ್ನುತ್ತಾರೆ. 1 ½ ವರ್ಷದ ಹಿಂದೆ ಕೆಟ್ಟು ಹೋದ ಬೋರ್ವೆಲ್ ರಿಪೇರಿ ಮಾಡಿಸಲು ಹೇಳಿದಾಗ ಆರೋಪಿ ರಿಪೇರಿ ಮಾಡಿಸಿಕೊಳ್ಳಲಿಲ್ಲ, ಮತ್ತು ರಿಪೇರಿ ಮಾಡಿಸಿದ ಹಣವನ್ನಾಗಲಿ ಅಥವ ಗುತ್ತಿಗೆ ಹಣವನ್ನಾಗಲಿ ಕೊಟ್ಟಿಲ್ಲ.

5. ಈ ಎಲ್ಲಾ ವಿಚಾರಗಳ ಸಂಬಂಧ ನಮ್ಮಿಬ್ಬರ ನಡುವೆ ಮಾತುಕತೆ ಆಗಿ ಪೋಲೀಸ್ ಠಾಣೆಗೂ ದೂರು ಕೊಟ್ಟೆ ಎಂದರೆ ಸರಿ. ಆದರೆ ಸದರಿ ದೂರನ್ನು ಆರೋಪಿ ನಮ್ಮ ಮನೆಗೆ ಬಂದು ಬಾಯಿಗೆ ಬಂದಂತೆ ಮಾತನಾಡಿದ ವಿಚಾರವಾಗಿ ದೂರು ಕೊಟ್ಟೆ. ಮೇಲ್ಕಂಡ ಎಲ್ಲಾ ವಿಚಾರಗಳ ಬಗ್ಗೆ ಪೋಲೀಸ್ ಠಾಣೆಯಲ್ಲಿ ನ್ಯಾಯಾ ಪಂಚಾಯತಿ ಆಗಿ ಸದರಿ ಪಂಚಾಯತಿಗೆ ಮುಖಂಡರಾದ ಹೊಸೂರು ಅಣ್ಣಯ್ಯ ನವರು ಕೂಡ ಬಂದಿದ್ದರು ನಮ್ಮ ಕಡೆಯಿಂದ ನನ್ನ ಮಾವ ಕೂಡ ಬಂದಿದ್ದರು ಎಂದರೆ ಹೊಸೂರು ಅಣ್ಣಯ್ಯ ಆರೋಪಿ ಪರವಾಗಿ ಮಾತನಾಡಲು ಬಂದಿದ್ದರು ಆದರೆ ಹಣವನ್ನು ನೀವು ಕೊಡುತ್ತೀರಾ ಎಂದು ನಾನು ಅವರಿಗೆ ಕೇಳಿದೆ ಸದರಿ ಪಂಚಾಯತಿಗೆ ನಮ್ಮ ಮಾವ ಬಂದಿರಲಿಲ್ಲ. ಪಂಚಾಯತಿ ಆದ ನಂತರ ಆರೋಪಿ ನನಗೆ ನೀಡಿದ ಚೆಕ್ ಅನ್ನು ನಾನು ವಾಪಸ್ಸು ನೀಡುತ್ತೇನೆ ಎಂದು ಪೋಲೀಸ್ ಠಾಣೆಯಲ್ಲಿ ಹೇಳಿ ಹೋಗಿದ್ದೆ ಎಂದರೆ ಸರಿ. ಈ ರೀತಿ ಪಂಚಾಯತಿ ನಡೆದು 3 ತಿಂಗಳ ಕಾಲ ನಾನು ಚೆಕ್ ಇಟ್ಟುಕೊಂಡು ಸುಮ್ಮನಿದ್ದೆ ಎಂದರೆ ಸರಿಯಲ್ಲ, ಅವರು ಚೆಕ್ ಅನ್ನು ಭರ್ತಿ ಮಾಡಿಕೊಟ್ಟಿದ್ದರು ಎನ್ನುತ್ತಾರೆ.

6. ಆರೋಪಿ ದಿಃ 01.06.2022ರಂದು ಚೆಕ್ ಕೊಟ್ಟು ಹಣ ತೆಗೆದುಕೊಂಡು ಹೋಗಿದ್ದರು. ಆರೋಪಿಯು ದಿಃ 01.06.2022ರ ಸುಮಾರು 6 ತಿಂಗಳ ಹಿಂದಿನನಿಂದಲೂ ಹಣ ಕೇಳಿಕೊಂಡು ಬರುತ್ತಿದ್ದರು. ನಾನು ಗುತ್ತಿಗೆ ಕೊಟ್ಟಿದ್ದ ಜಮೀನಿನ ವ್ಯವಸಾಯಕ್ಕೆ, ಜಮೀನಿನ ಬೋರ್ವೆಲ್ ಹಾಗೂ ಪೈಪ್ ಲೈನ್ ರಿಪೇರಿಗೆ ಆರೋಪಿ ಹಣ ಕೇಳುತ್ತಾ ಬಂದಿದ್ದರು.

7. ಆರೋಪಿ ತಮ್ಮ ಆಜಾದ್ ನಗರದ ಜಮೀನಿನ ವ್ಯವಸಾಯಕ್ಕೆ, ಬೋರ್ವೆಲ್ ರಿಪೇರಿಗೆ ಆರೋಪಿ ಹಣ ಕೇಳಿರಲಿಲ್ಲ ಎಂದರೆ ಅದು ನನಗೆ ಗೊತ್ತಿಲ್ಲ. ನಾನು ಆರೋಪಿಗೆ ಹಣವನ್ನು ನನ್ನ ಮನೆಯಲ್ಲಿ ಕೊಟ್ಟಿದ್ದೆ ಆಗ ನನ್ನ ಹೆಂಡತಿ ಮನೆಯಲ್ಲಿದ್ದರು, ಆರೋಪಿ ಕಡೆಯಿಂದ ಯಾರು ಬಂದಿರಲಿಲ್ಲ. ಆರೋಪಿ ಏನು ವಿದ್ಯಾಭ್ಯಾಸ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

8. ಚೆಕ್ ಬರೆದುಕೊಟ್ಟಿದ್ದಾರೆ ಎಂದು ಹೇಳಿದ್ದು ಅದರ ಬರವಣಿಗೆ ನನ್ನ ಮುಂದೆ ಆಗಿಲ್ಲ. ಆರೋಪಿ ಚೆಕ್ ನಲ್ಲಿ ರೂ.3,25,000/- ಹಣವನ್ನು ಬರೆದುಕೊಟ್ಟು ಸಹಿ ಮಾಡಿ ಕೊಟ್ಟಿದ್ದರು, ಚೆಕ್ ನ ಮೇಲಿನ ಬರವಣಿಗೆ ಯಾರಿಂದ ಮಾಡಿಸಿದ್ದಾರೆ ನನಗೆ ಗೊತ್ತಿಲ್ಲ. ಚೆಕ್ ನ ಮೇಲೆ ಕನ್ನಡದಲ್ಲಿ ಬರವಣಿಗೆ ಮಾಡಿದ್ದಾರೆ. ಚೆಕ್ ನ ಮೇಲಿನ ಬರವಣಿಗೆಯ ಇಂಕ್ ಗೂ ಹಾಗೂ ಸಹಿ ಮಾಡಿರುವ ಇಂಕ್ ಗೆ ವ್ಯತ್ಯಾಸವಿದೆ ಎಂದರೆ ಸಹಿಯನ್ನು ನನ್ನ ಪೆನ್ ನಿಂದ ಮಾಡಿಕೊಟ್ಟರು, ಬರವಣಿಗೆ ಬೇರೆಲ್ಲಿ ಮಾಡಿಸಿಕೊಂಡ್ದಾರೆ ನನಗೆ ಗೊತ್ತಿಲ್ಲ. ಆರೋಪಿ ನನ್ನ ಮುಂದೆ ಖಾಲಿ ಚೆಕ್ ಗೆ ಸಹಿ ಮಾಡಿಕೊಟ್ಟಿಲ್ಲ, ಬರವಣಿಗೆ ಇತ್ತು.

9. ಕಾನೂನು ಪ್ರಕಾರ ರೂ.2 ಲಕ್ಷ ಕ್ಕೂ ಮೇಲ್ಪಟ್ಟ ವ್ಯವಹಾರಗಳೆಲ್ಲಾ ಚೆಕ್ ಮೂಲಕ ಆಗಬೇಕು ಎಂದರೆ ನನ್ನ ಬಳಿ ನಗದು ಇತ್ತು ಅದನ್ನೆ ಆರೋಪಿಗೆ ಕೊಟ್ಟಿದ್ದೆ. ಸದರಿ ಹಣ ನನಗೆ ಬಾಳೆಯಿಂದ ಸ್ವಲ್ಪ, ಗುತ್ತಿಗೆ ಕೆಲಸದಿಂದ ಬಂದ ಕೂಡಿಟ್ಟ ಹಣ ಇತ್ತು. ಬಾಳೆಯಿಂದ ಹಣ ಬಂದಿತ್ತು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿಗಳು ಇಲ್ಲ, ಅದಕ್ಕೆ ರಶೀದಿ ಕೊಡುವುದಿಲ್ಲ, ಗುತ್ತಿಗೆಯಿಂದ ಬಂದ ಹಣದ ಬಗ್ಗೆ ಕೂಡ ರಶೀದಿ ಕೊಡುವುದಿಲ್ಲ. ನಾನು ಎಲ್ಲಾ ಕಂಟ್ರಾಕ್ಟರ್ ಗಳಿಂದ ಸಾಮಾನ್ಯವಾಗಿ ಉಪ ಗುತ್ತಿಗೆ ಪಡೆದುಕೊಳ್ಳುತ್ತಿರುತ್ತೇನೆ, ಈ ಬಗ್ಗೆ ಕೂಡ ಯಾವುದೇ

ದಾಖಲಾತಿಗಳು ಇಲ್ಲ. ಕಂಟ್ರಾಕ್ಟರ್ ಹಾಗೂ ಸಬ್ ಕಂಟ್ರಾಕ್ಟರ್ ನಡುವೆ ಒಪ್ಪಂದಗಳು ಆಗಬೇಕು ಎಂದರೆ ಆ ತರಹ ಏನಿಲ್ಲ.

10. ನಾನು ಸುಮಾರು 50-60 ಲಕ್ಷದ ಗುತ್ತಿಗೆ ಕೆಲಸ ಮಾಡಿದ್ದೇನೆ. ನಾನು ಯಾರ್ಯಾರ ಬಳಿ ಗುತ್ತಿಗೆ ಕೆಲಸ ಮಾಡಿದ್ದೇನೆ ಹೆಸರು ಹೇಳಿ ಎಂದರೆ ಸಾಕ್ಷಿ ನಾನು ಸುಮಾರು ಜನರ ಬಳಿ ಗುತ್ತಿಗೆ ಕೆಲಸ ತೆಗೆದುಕೊಳ್ಳುವುದರಿಂದ ಎಲ್ಲರ ಹೆಸರು ಇಲ್ಲಿ ಹೇಳಲಾಗುವುದಿಲ್ಲ, ಒಬ್ಬರ ಬಳಿ ಕೆಲಸ ತೆಗೆದುಕೊಂಡರೆ ಹೇಳಬಹುದು ಎನ್ನುತ್ತಾರೆ. 2022ರಲ್ಲಿ ನನ್ನಲ್ಲಿ ರೂ.3,25,000/- ನಗದಾಗಿ ಇತ್ತು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿಗಳು ಇಲ್ಲ.

11. ಸಾಮಾನ್ಯವಾಗಿ ದೊಡ್ಡ ಮೊತ್ತದ ಹಣವನ್ನು ಸಾಲವಾಗಿ ಕೊಡುವಾಗ ಸಾಲ ತೆಗೆದುಕೊಳ್ಳುವವರ ಪೂರ್ವಾಪರ ಮತ್ತು ಅವರ ಆರ್ಥಿಕ ಸಾಮರ್ಥ್ಯ ಎಲ್ಲವನ್ನು ವಿಚಾರ ಮಾಡಿಯೇ ಸಾಲ ಕೊಡುತ್ತೇವೆ ಎಂದರೆ ಸರಿ. ನಾನು ನನ್ನ ಜಮೀನಿನಲ್ಲಿ ಕೂಲಿ ಮಾಡುವವರಿಗರಿಗೆ ಮತ್ತು ನಮ್ಮ ಜಮೀನು ಗುತ್ತಿಗೆ ಪಡೆದವರಿಗೆ ಹಣವನ್ನು ಸಾಲವಾಗಿ ಕೊಡುವುದಿಲ್ಲ ಎಂದರೆ ಕೂಲಿ ಮಾಡುವವರಿಗೆ ಏಕೆ ಕೊಡುತ್ತೇವೆ, ಗುತ್ತಿಗೆ ಮಾಡುವವರಿಗೆ ಅವರ ಬೆಳೆ ಇರುತ್ತದಲ್ಲಾ ಎಂದು ಅಲ್ಪಸ್ವಲ್ಪ ಸಾಲ ಕೊಡುತ್ತೇವೆ.

12. ಆರೋಪಿ ನಮ್ಮ ಜಮೀನಿನಲ್ಲಿ 27 ಕ್ವಿಂಟಾಲ್ ಮುಸುಕಿನ ಜೋಳ ಬೆಳೆದಿದ್ದರು ಎಂದರೆ ನನಗೆ ಗೊತ್ತಿಲ್ಲ, ನನಗೆ ಹುಷಾರಿರಲಿಲ್ಲ. ಆರೋಪಿ ಬೆಳೆದಿದ್ದ 27 ಕ್ವಿಂಟಾಲ್ ಮುಸುಕಿನ ಜೋಳದ ಚೀಲಗಳ ಮೇಲೆ ತೂಕವನ್ನು ನನ್ನ ಹೆಂಡತಿಯೇ ಬರೆದುಕೊಂಡಿದ್ದರು ಎಂದರೆ ಸರಿಯಲ್ಲ. ಅದರ ಜೊತೆಗೆ ಅದರ ಸಿಪ್ಪೆ ಮತ್ತು ಕಡ್ಡಿಯನ್ನು ಕೂಡ ರೂ.10,000/-ಗಳಿಗೆ ನಾನೇ ಮಾಡಿಕೊಂಡೆ ಎಂದರೆ ಸುಳ್ಳು. ಆರೋಪಿ ಬೆಳೆದಿದ್ದ ಮುಸುಕಿನ ಜೋಳದ ಸಂಪೂರ್ಣ ಬೆಳೆಯನ್ನು ನಾನು ಪಡೆದುಕೊಂಡಾಗ್ಯೂ ಆರೋಪಿಗೆ ಒಂದು ರೂಪಾಯಿ ಕೂಡ ಕೊಡಲಿಲ್ಲ ಎಂದರೆ ಸುಳ್ಳು. ಈ ರೀತಿ ಆರೋಪಿಯಿಂದ ಮುಸುಕಿನ ಜೋಳದ ಬೆಳೆಯನ್ನು ಪಡೆದುಕೊಂಡ ನಾನು ಬೋರ್ ವೆಲ್ ರಿಪೇರಿ ಹಣವನ್ನು ನೀನೆ ಕೊಡಬೇಕು ಎಂದು ಹೇಳಿದ್ದೆ ಎಂದರೆ ಸುಳ್ಳು. ಆ ಸಮಯದಲ್ಲಿ ನನ್ನ ಹಾಗುಾ ಆರೋಪಿಯ ನಡುವೆ ಗಲಾಟೆ ಆಯಿತು ಎಂದರೆ ಸುಳ್ಳು. ಜಮೀನು ಗುತ್ತಿಗೆ ಕೊಡುವಾಗ ನಾನು

ಆರೋಪಿಯಿಂದ ಪಡೆದುಕೊಂಡಿದ್ದ ಚೆಕ್ ಅನ್ನು ಈ ರೀತಿ ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸುಳ್ಳು. ಸದರಿ ರೂ.3,25,000/- ಹಣಕ್ಕೆ ನಾವು ಬಡ್ಡಿ ಮಾತನಾಡಿರಲಿಲ್ಲ.

**13.** ಆರೋಪಿಯ ತಂದೆ ಹೆಸರು ಲೇಟ್ ನಿಂಗೇಗೌಡ. ಆರೋಪಿ ಹೆಂಡತಿ-ಮಕ್ಕಳ ಹೆಸರುಗಳು ನನಗೆ ಗೊತ್ತಿಲ್ಲ, ಆದರೆ ಅವರೆಲ್ಲಾ ನಮ್ಮ ಜಮೀನಿನ ಗುತ್ತಿಗೆ ಕೆಲಸಕ್ಕೆ ಬರುತ್ತಿದ್ದರು. ಆರೋಪಿ ಅಣ್ಣ-ತಮ್ಮಂದಿರ ಹೆಸರುಗಳು ಕೂಡ ನನಗೆ ಗೊತ್ತಿಲ್ಲ,ಈ ರೀತಿ ಯಾವುದೇ ಪೂರ್ವಾಪರ ಗೊತ್ತಿಲ್ಲದ ಆರೋಪಿ ನಾನು ರೂ.3,25,000/- ಹಣವನ್ನು ಸಾಲವಾಗಿ ಕೊಡುವ ಪ್ರಶ್ನೆಯೇ ಇಲ್ಲ ಎಂದರೆ ಅವರು 15 ವರ್ಷಗಳಿಂದ ನಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದರು ಎನ್ನುತ್ತಾರೆ. ನನ್ನ ಬಳಿ ಹಣ ಪಡೆದುಕೊಳ್ಳುವ ಮುಂಚಿನಿಂದಲೂ ಮತ್ತು ಈ ಪ್ರಕರಣ ಹೂಡುವವರೆಗೆ ನಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ನಾನು ಈ ಕೇಸ್ ಹೂಡಿದ ನಂತರ ಕೂಡ ಆರೋಪಿ ನಮ್ಮ ಮನೆಗೆ ಆಗಾಗ ಕೆಲಸಕ್ಕೆ ಬರುತ್ತಾರೆ.

**14.** ನಾವು ಒಂದು ದಿನಕ್ಕೆ ರೂ.700/- ಕೂಲಿ ಕೊಡುತ್ತೇವೆ. ಒಂದೊಂದು ಕೆಲಸಕ್ಕೆ ಒಂದೊಂದು ರೀತ್ಯಾ ಕೂಲಿ ಕೊಡುತ್ತೇವೆ. ಆರೋಪಿ ಯಾವ ವಿಧದ ಕೆಲಸ ಮಾಡುತ್ತಾರೆ ಆ ಪ್ರಕಾರ ಕೂಲಿ ಕೊಡುತ್ತೇವೆ. ಆರೋಪಿ ಮರ ಹೊರುತ್ತಾರೆ, ಔಷಧಿ ಹೊಡೆಯುತ್ತಾರೆ ಆರಂಭದ ಎಲ್ಲಾ ಕೆಲಸವನ್ನು ಮಾಡುತ್ತಾರೆ. ಆರೋಪಿ ನಮ್ಮಲ್ಲಿ ಕೂಲಿ ಕೆಲಸ ಮಾಡುತ್ತಿರುವುದನ್ನೆ ದುರುಪಯೋಗಪಡಿಸಿಕೊಂಡು ಆತನ ವಿರುದ್ಧ ಸುಳ್ಳು ಕೇಸ್ ಹೂಡಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀಸವಾಲುಃ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.